ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 18/09/2019

# ಡಿಕೆಶಿಗೆ ಹದಿನಾಲ್ಕು ದಿನ ನ್ಯಾಯಾಂಗ ಬಂಧನ

## ಜಾಮೀನು ಹಣೆಬರಹ ಇಂದು ನಿರ್ಧಾರ

■ ರಾಘವ ಶರ್ಮ ನಿಡ್ಲೆ ನವದೆಹಲಿ

ಕೋಟ್ಯಂತರ ರೂಪಾಯಿ ಅಕ್ರಮ ಹಣ ವಹಿವಾಟಿನ ಆರೋಪದ ಮೇಲೆ ಬಂಧಿತರಾಗಿರುವ ಮಾಜಿ ಸಚಿವ ಡಿ.ಕೆ. ಶಿವಕುಮಾರ್ ಅವರ ಜಾರಿ ನಿರ್ದೇಶನಾಲಯದ (ಇ.ಡಿ.) ಕಸ್ಟಡಿ ಅಂತ್ಯಗೊಂಡಿರುವುದರಿಂದ ಇ.ಡಿ. ವಿಶೇಷ ಕೋರ್ಟ್ ಅವರನ್ನು 14 ದಿನ(ಅ.1ರವರೆಗೆ) ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಇ.ಡಿ. ವಿಶೇಷ ನ್ಯಾಯಾಧೀಶ ಅಜಯ್ ಕುಮಾರ್ ಕುಹರ್ ಆದೇಶ ಪ್ರಕಟಿಸಿದ್ದಾರೆ.

ಕೋರ್ಟ್ ಆದೇಶದ ಪ್ರಕಾರ ಡಿಕೆಶಿ ತಿಹಾರ್ ಜೈಲು ಸೇರಬೇಕು. ಆದರೆ, ಅನಾರೋಗ್ಯದ ಹಿನ್ನೆಲೆಯಲ್ಲಿ ಮಂಗಳವಾರದ ವಿಚಾರಣೆ ಬಳಿಕ ಅವರನ್ನು ಮತ್ತೆ ಆರ್‌ಎಂಎಲ್. ಆಸ್ಪತ್ರೆಗೆ ಕರೆದೊಯ್ಯಲಾಯಿತು. ವೈದ್ಯರ ಸೂಚನೆ ಮೇರೆಗೆ ಅವರನ್ನು ಆಸ್ಪತ್ರೆಗೆ ದಾಖಲಿಸಬೇಕೋ ಅಥವಾ ಜೈಲಿಗೆ ಕಳುಹಿಸಬೇಕೋ ಎಂಬುದನ್ನು ನಿರ್ಧರಿಸುವಂತೆ ಕೋರ್ಟ್ ಸೂಚಿಸಿತ್ತು. ವೈದ್ಯರ ಸೂಚನೆ ಬಳಿಕ ಡಿಕೆಶಿಯನ್ನು ಆಸ್ಪತ್ರೆಯ ಹೃದ್ರೋಗ ಘಟಕದಲ್ಲೇ ರಾತ್ರಿ ಇರಿಸಿಕೊಳ್ಳಲಾಯಿತು. ಏತನ್ಮಧ್ಯೆ, ಶಿವಕುಮಾರ್‌ಗೆ ಜಾಮೀನು ನೀಡಬೇಕೆ ಬೇಡವೇ ಎಂಬ ಬಗ್ಗೆ ಬುಧವಾರ ವಿಚಾರಣೆ ಮುಂದುವರಿಯಲಿದೆ. ಜಾಮೀನು ಸಿಗದಿದ್ದಲ್ಲಿ ಅವರು ದೆಹಲಿಯ ತಿಹಾರ್ ಜೈಲಿನಲ್ಲೇ 13 ದಿನ ಕಳೆಯಬೇಕಿದೆ. ತಮ್ಮ ಕಕ್ಷಿದಾರನಿಗೆ ಜಾಮೀನು ನೀಡುವಂತೆ ಹಿರಿಯ ವಕೀಲರಾದ ಅಭಿಷೇಕ್ ಮನುಸಿಂಘ್ವಿ , ಮುಕುಲ್ ರೋಹಟ್ಗಿ ಪ್ರಖರ ವಾದ ಮಂಡಿಸಿದರೂ, ಮಂಗಳವಾರದ ವಿಚಾರಣೆ ಅಪೂರ್ಣಗೊಂಡ ಹಿನ್ನೆಲೆಯಲ್ಲಿ ಜಾಮೀನಿನ ವಿಚಾರಣೆ ಬುಧವಾರಕ್ಕೆ ಮುಂದೂಡಲಾಯಿತು. ▶ಪುಟ 7



ಅಭಿಮಾನಿಗಳತ್ತ ಕೈಬೀಸಿದ ಡಿಕೆಶಿ.

## ಹವಾಲಾ ಮ್ಯಾಜಿಕ್



₹20ಕೊಟ್ಟು ₹20 ಕೋಟಿ ಪಡೆದಿದ್ದ ಐಶ್ವರ್ಯಾ!

▼ 8

ಸಿಂಗಾಪುರ್‌ನಲ್ಲಿ ಡೀಲ್